# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 374

ಮಾನ್ಯ ಸದಸ್ಯರ ಹೆಸರು : ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 18.07.2024

ಉತ್ತರಿಸುವ ಸಚಿವರು. : ಗೃಹ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ 02 ವರ್ಷಗಳಿಂದ ಶಿವಮೊಗ್ಗ ಜಿಲ್ಲೆಯಲ್ಲಿ ನಡೆದಿರುವ ಕೊಲೆಗಳ ಸಂಖ್ಯೆ ಎಷ್ಟು; (ಘಟನೆವಾರು ವಿವರಗಳನ್ನು ಒದಗಿಸುವುದು) | ಶಿವಮೊಗ್ಗ ಜಿಲ್ಲೆಯಲ್ಲಿ 2022, 2023 ಮತ್ತು 2024ರ ಜುಲೈ 10ರ ವರೆಗೆ ನಡೆದಿರುವ ಕೊಲೆ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿದೆ.<br><br>ವರದಿಯಾದ ಕೊಲೆ ಪ್ರಕರಣಗಳ ಸಂಖ್ಯೆ:<br>2022 – 29<br>2023 – 38<br>10.07.2024 ರವರೆಗೆ – 20<br><br>ಘಟನಾವಾರು ಪ್ರಕರಣಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಆ | ಈ ಕೊಲೆಗಳು ನಡೆದಿರುವುದಕ್ಕೆ ಕಾರಣಗಳೇನು ಹಾಗೂ ಇದುವರೆಗು ಈ ಪ್ರಕರಣಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ಕೊಲೆಗಳು ನಡೆದಿರುವುದಕ್ಕೆ ಕಾರಣ ಹಾಗೂ ಇದುವರೆಗೂ ಕೈಗೊಂಡ ಕ್ರಮಗಳು ಕೆಳಕಂಡಂತಿದೆ.<br><br>ಲಾಭಕ್ಕಾಗಿ ಕೊಲೆ, ಆಸ್ತಿ ವಿಚಾರ, ರೌಡಿ ಚಟುವಟಿಕೆಯಲ್ಲಿ ಕೊಲೆ, ವೈಯಕ್ತಿಕ ದ್ವೇಷ, ಕೌಟುಂಬಿಕ ಕಲಹ, ಹಳೆಯ ವೈಷಮ್ಯ, ಪ್ರೀತಿಸಿದ ವಿಚಾರ, ಅಕ್ರಮ ಸಂಬಂಧ, ಜಮೀನಿನ ವಿಚಾರದ ಕಾರಣಗಳಿಗಾಗಿ ಕೊಲೆ ಪ್ರಕರಣಗಳು ವರದಿಯಾಗಿರುತ್ತವೆ.<br><br>ದಾಖಲಾದ ಎಲ್ಲಾ ಪ್ರಕರಣಗಳಲ್ಲಿ ತನಿಖೆ ಕೈಗೊಳ್ಳಲಾಗಿದ್ದು, ಆರೋಪಿಗಳನ್ನು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿರುತ್ತದೆ. ತನಿಖೆ ಪೂರ್ಣಗೊಂಡಿರುವ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಲಾಗಿರುತ್ತದೆ. |
| ಇ | ಶಿವಮೊಗ್ಗ ಜಿಲ್ಲೆಯಲ್ಲಿ ಯುವಕರು ಗಾಂಜಾ ಸೇವನೆಯಿಂದ ಕೊಲೆ ಪ್ರಕರಣಗಳು ಹೆಚ್ಚುತ್ತಿದೆಯೇ; | ಶಿವಮೊಗ್ಗ ಜಿಲ್ಲೆಯಲ್ಲಿ ಯುವಕರ ಗಾಂಜಾ ಸೇವನೆಯಿಂದ ಕೊಲೆ ಪ್ರಕರಣಗಳು ವರದಿಯಾಗಿರುವುದಿಲ್ಲ. |

| | | |
|---|---|---|
| ಈ | ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಶಿವಮೊಗ್ಗ ಜಿಲ್ಲೆಯಲ್ಲಿ ಕೊಲೆ ಪ್ರಕರಣಗಳನ್ನು ತಡೆಗಟ್ಟಲು ಈ ಕೆಳಕಂಡಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿರುತ್ತದೆ.<br>➢ ಶಿವಮೊಗ್ಗ ಜಿಲ್ಲೆಯ ಪೊಲೀಸ್ ಠಾಣೆಗಳಲ್ಲಿ ಹೊಸ ಬೀಟ್ ಪದ್ಧತಿಯಂತೆ, ಪ್ರತಿ ದಿನ ಹಗಲು ಮತ್ತು ರಾತ್ರಿ ಗಸ್ತು ಕರ್ತವ್ಯಕ್ಕೆ ಸಿಬ್ಬಂದಿಯವರನ್ನು ನೇಮಕ ಮಾಡಲಾಗಿದ್ದು, ಉಸ್ತುವಾರಿಗಾಗಿ ವ್ಯಾಪ್ತಿಯ ಅಧಿಕಾರಿಗಳನ್ನು ನೇಮಕ ಮಾಡಲಾಗಿರುತ್ತದೆ. ಗಸ್ತು ಕರ್ತವ್ಯದ ಅವಧಿಯಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ಜರುಗದಂತೆ ನಿಗಾ ವಹಿಸಲು ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಸೂಕ್ತ ಸೂಚನೆ ನೀಡಲಾಗಿರುತ್ತದೆ.<br>➢ ಪ್ರತಿ ದಿನ ಬೆಳಿಗ್ಗೆ ಹಾಗೂ ಸಂಜೆ ಪ್ರತಿ ಠಾಣಾ ಸರಹದ್ದಿನಲ್ಲಿ ಫೂಟ್ ಪ್ಯಾಟ್ರೋಲಿಂಗ್ ನಡೆಸಲಾಗುತ್ತಿರುತ್ತದೆ.<br>➢ ಪ್ರತಿ ದಿನ ಸಂಜೆ 06-30 ರಿಂದ ರಾತ್ರಿ 10-30 ಗಂಟೆಯವರೆಗೆ ನಗರದ ಹೊರ ವಲಯದಲ್ಲಿ ಏರಿಯಾ ಡಾಮಿನೇಷನ್ ಮಾಡಿಸುತ್ತಿದ್ದು, ಅನುಮಾನಾಸ್ಪದವಾಗಿ ತಿರುಗಾಡುವವರ ಮೇಲೆ ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.<br>➢ ಪ್ರತಿ ದಿನ ಬೆಳಿಗ್ಗೆ ಪೊಲೀಸ್ ಇನ್ಸ್‌ಪೆಕ್ಟರ್ ದರ್ಜೆಯ ಅಧಿಕಾರಿಯ ಉಸ್ತುವಾರಿಯಲ್ಲಿ ಗುಡ್ ಮಾರ್ನಿಂಗ್ ಬೀಟ್ ವ್ಯವಸ್ಥೆ ಕೈಗೊಳ್ಳಲಾಗುತ್ತಿದೆ.<br>➢ ಪ್ರತಿ ದಿನ ಸಂಜೆ 08-00 ಗಂಟೆಯಿಂದ ರಾತ್ರಿ 11-00 ಗಂಟೆಯವರೆಗೆ ಪ್ರತಿ ಠಾಣೆಯ ಠಾಣಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಗಸ್ತು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.<br>➢ ಪ್ರತಿ ದಿನ ರಾತ್ರಿ ಗಸ್ತಿನಲ್ಲಿ ರೌಡಿ ಆಸಾಮಿಗಳ ತಪಾಸಣೆ ನಡೆಸಲಾಗುತ್ತಿರುತ್ತದೆ.<br>➢ ರೌಡಿ ಆಸಾಮಿಗಳ ಮೇಲೆ ನಿಗಾ ಇಟ್ಟಿದ್ದು, ಕಾಲಕಾಲಕ್ಕೆ ಅವರನ್ನು ಠಾಣೆಗೆ ಕರೆಯಿಸಿ ರೌಡಿ ಪರೇಡ್ ನಡೆಸಲಾಗುತ್ತಿದೆ. |

ಸಂಖ್ಯೆ: ಹೆಚ್‌ಡಿ 22 ಪಿಸಿಕ್ಯೂ 2024

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು

# ಅನುಬಂಧ

## ಘಟನೆವಾರು ವಿವರಗಳು

| ಕ್ರ.ಸಂ. | ಕೊಲೆಗೆ ಕಾರಣಗಳು | 2022 | 2023 | 2024 |
|---|---|---|---|---|
| 1. | ಅಕ್ರಮ ಸಂಬಂಧ ಹಿನ್ನಲೆ | 2 | 7 | 1 |
| 2. | ಲಾಭಕ್ಕಾಗಿ ಕೊಲೆ | 1 | 1 | – |
| 3. | ರೌಡಿ ಚಟುವಟಿಕೆಗಳ ಹಿನ್ನಲೆ | 2 | – | – |
| 4. | ಕೌಟುಂಬಿಕ ಸಮಸ್ಯೆಯ ಹಿನ್ನಲೆ | 3 | 1 | 5 |
| 5. | ಹಣಕಾಸಿನ ವ್ಯವಹಾರದ ಹಿನ್ನಲೆ | 8 | 2 | 3 |
| 6. | ಹಳೆಯ ದ್ವೇಷದ ಕಾರಣ | 1 | 1 | 3 |
| 7. | ಆಸ್ತಿ ವಿಚಾರಕ್ಕೆ | 3 | 8 | 2 |
| 8. | ವೈಯಕ್ತಿಕ ದ್ವೇಷ | 6 | 3 | 1 |
| 9. | ಕ್ಷುಲ್ಲಕ ಕಾರಣಕ್ಕೆ | 1 | 8 | 2 |
| 10. | ಪ್ರೀತಿಯ ವಿಚಾರ | – | 2 | 2 |
| 11. | ಲೈಂಗಿಕ ಸಂಪರ್ಕ ಹೊಂದಲು ಅಡ್ಡಿಯಾದ ಕಾರಣ | – | 1 | – |
| 12. | ಕಳ್ಳತನ ಮಾಡಲು ಹೋದಾಗ | 1 | – | – |
| 13. | ಟೆಕ್ನಿಕಲ್ ಮರ್ಡರ್ (ತಂದೆ–ತಾಯಿ ಕೊಲೆ ಮಾಡಿ ತಾವು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳು) | – | 2 | – |
| 14. | ಕೋಮುವಾದದ ಹಿನ್ನಲೆ | 1 | – | – |
| 15. | ಕಾರಣ ಪತ್ತೆಯಾಗದ ಪ್ರಕರಣಗಳು | – | 2 | 1 |
| ಒಟ್ಟು | | **29** | **38** | **20** |